**ಸಾಕ್ಷಿಯನ್ನು ದಿಃ 29.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 3 ರಿಂದ 8 ರವರ ಪರ ಶ್ರೀ ಹೆಚ್.ಸಿ.ಎಸ್ ವಕೀಲರಿಂದಃ**

ಸದರಿ ದಾವೆಯನ್ನು ನಾನು ಭಾಗವನ್ನು ಕೇಳಿ ಹೂಡಿರುತ್ತೇನೆ ಎಂದರೆ ಸರಿ. ನನ್ನ ತಾತನ ಹೆಸರು ಗುರಪ್ಪ. ನಾನು ನನ್ನ ವಾದಪತ್ರದಲ್ಲಿ ನನ್ನ ತಾತನವರು 2 ಎಕರೆ 11 ಗುಂಟೆ ಖರೀದಿ ಮಾಡಿರುತ್ತಾರೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ನಮ್ಮ ತಾತ ಖರೀದಿ ಹಿಡಿಯುವ ಕಾಲಕ್ಕೆ ಮಾಡಿಕೊಂಡಿರುವ ಖರೀದಿ ಪತ್ರವನ್ನು ನಾನು ನೋಡಿಲ್ಲ. ಸಾಕ್ಷಿ ಮುಂದುವರೆದು ನಾನು ಆಗ ಚಿಕ್ಕವಳಿದ್ದೆ ಎಂದು ನುಡಿಯುತ್ತಾರೆ. ದಿ 7.1.1969 ರಂದು ನನ್ನ ತಾತ 1 ಎಕರೆ 00 ಗುಂಟೆಯನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಯಾರ ಕಡೆಯಿಂದ ಸದರಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿ 7.1.1969 ರಲ್ಲಿ ಆಗಿರುವ ಖರೀದಿ ಪತ್ರವಾಗಿದ್ದು ಸದರಿ ಪತ್ರದ ಪ್ರಕಾರ ನನ್ನ ತಾತ 1 ಎಕರೆ ಜಮೀನನ್ನು ಮಿಟ್ಟಾಲ ಎಂಬುವವರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ ಡಿ 1 ಅಂತ ಗುರುತಿಸಲಾಯಿತು. ನನ್ನ ತಾತ ತೀರಿಕೊಂಡ ನಂತರ ಸದರಿ ಆಸ್ತಿಯ ಖಾತೆಗೆ ನನ್ನ ತಂದೆ ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ದಾವೆಯನ್ನು ಹೂಡಲು ವಕೀಲರಿಗೆ ಮಾಹಿತಿ ನಾನೇ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನಿಜ ಎಂದರೆ ಸರಿ. ಅದೇ ರೀತಿ ನಾನು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ನಿಜವಾಗಿದೆ ಎಂದರೆ ಸರಿ. ನಾನು ನನ್ನ ವಾದ ಪತ್ರದಲ್ಲಿ ಆದಿ ಲಕ್ಷ್ಮಮ್ಮ ಎಂಬುವವರಿಗೆ ನನ್ನ ತಂದೆ 30 ಗುಂಟೆ ಜಮೀನನ್ನು ದಿ 17.1.1985 ರಂದು ಮಾರಾಟ ಮಾಡಿದ್ದಾರೆ ಎಂದು ನಮೂದಿಸಿದಂತೆ ಮಾಡಿದ್ದೇವೆ ಎಂದರೆ ಸರಿ. ಆದಿಲಕ್ಷ್ಮಮ್ಮ ರವರು ದಿ15.3.2001 ರಲ್ಲಿ ಆನಂದ್ ರವರಿಗೆ 15 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ 28.6.2003 ರಂದು ಆದಿಲಕ್ಷ್ಮಮ್ಮ ಎಂಬುವವರು ಇನ್ನುಳಿದ 15 ಗುಂಟೆ ಕೂಡಾ ಆನಂದ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನನಗೆ ಮಾಹಿತಿ ಯಾವಾಗ ತಿಳಿದು ಬಂದಿರುತ್ತದೆ ಎಂದರೆ ಸದರಿ ದಾವೆಯನ್ನು ಹೂಡುವ 7 ವರ್ಷದ ಮೊದಲು ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಆದಿಲಕ್ಷ್ಮಮ್ಮ ರವರು ಆನಂದ್ ರವರ ಪರವಾಗಿ ಮಾಡಿಕೊಟ್ಟಿರುವ ಖರೀದಿ ಪತ್ರದ ಬಗ್ಗೆ ನನಗೆ ತಿಳಿದು ಬಂದ ನಂತರ ಅವುಗಳನ್ನು ಪ್ರಶ್ನಿಸಿ ಸದರಿ ದಾವೆಯನು ಹೊರತುಪಡಿಸಿ ಬೇರೆ ಯಾವುದೇ ಪ್ರಾಧಿಕಾರದ ಮುಂದೆ ಅವುಗಳನ್ನು ಪ್ರಶ್ನಿಸಿಲ್ಲ. ನನ್ನ ತಂದೆ ಆದಿಲಕ್ಷ್ಮಮ್ಮ ರವರ ಪರವಾಗಿ 30 ಗುಂಟೆಯನ್ನು ಮಾರಾಟ ಮಾಡಿದ್ದು, ಇನ್ನುಳಿದ 10 ಗುಂಟೆಯನ್ನು ಪ್ರತಿವಾದಿ ನಂಃ4 ರಿಂದ 8 ರವರ ತಂದೆಯಾದ ಮುನಿವೆಂಕಟಪ್ಪ ರವರ ಪರವಾಗಿ 19.10.1995 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ತಿಳಿದು ಬಂದ ನಂತರ ನಾನು ಈ ದಾವೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಆನಂದ್ ರವರು ಆದಿಲಕ್ಷ್ಮಮ್ಮ ಇವರ ಕಡೆಯಿಂದ ಆಸ್ತಿ ಖರೀದಿ ಮಾಡಿದ ನಂತರ 2 ಬೋರ್ ವೆಲ್ಲನ್ನು ಹಾಕಿ ಖರೀದಿ ಹಿಡಿದಿರುವ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನಾನು ಹಾಗೂ ವಾದಿ ನಂಃ1 ರವರು ಸ್ವಾಧೀನಾನುಭವದಲ್ಲಿ ಇದ್ದೇವೆ. ಸದರಿ ಸಂಗತಿಯನ್ನು ಸಾಬೀತು ಪಡಿಸಲು ದಾಖಲಾತಿಗಳು ನನ್ನ ಕಡೆಗೆ ಇರುವ ಬಗ್ಗೆ ನಾನು ನೋಡಬೇಕು. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಒಬ್ಬಳೇ ಹೆಂಡತಿ ಎಂದು ನುಡಿಯುತ್ತಾರೆ. ನನ್ನ ತಂದೆಗೆ ದೊಡ್ಡ ಹೆಂಡತಿ ಚಿನ್ನಕ್ಕ ಹಾಗೂ 2 ನೇ ಹೆಂಡತಿ ಗುರಮ್ಮ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ದೊಡ್ಡ ಹೆಂಡತಿಯಾದ ಚಿನ್ನಕ್ಕನ ಮಕ್ಕಳು ಎಂದು ನುಡಿಯುತ್ತಾರೆ. ಚಿನ್ನಕ್ಕನಿಗೆ ನಾನು, ವಾದಿ ನಂಃ1 ಮತ್ತು ಪ್ರತಿವಾದಿ ನಂಃ2 ಅಂತ 3 ಜನ ಮಕ್ಕಳು. ಗುರಮ್ಮ ಎಲ್ಲಿ ವಾಸಿಸುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ಗುರಮ್ಮನಿಗೆ ಗುರಪ್ಪ, ಚಿನ್ನಪ್ಪ, ಶ್ರೀನಿವಾಸ, ರಾಜ, ನಾರಾಯಣಮ್ಮ, ವೆಂಕಟಮ್ಮ, ಗಂಗಮ್ಮ, ಗಂಗೋಜಮ್ಮ ಎಂಬ 8 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಾಯಿ ದೊಡ್ಡ ಹೆಂಡತಿ ಅಂತ ಹೇಳಿದ್ದು, 2 ನೇ ಹೆಂಡತಿಯ ಬಗ್ಗೆ ನನಗೆ ಗೊತ್ತಿಲ್ಲ. ದಿ 5.3.1970 ರಲ್ಲಿ ನನ್ನ ತಂದೆ

ಸೊಣ್ಣೇಗೌಡರ ಕಡೆಯಿಂದ ಸರ್ವೆ ನಂಃ51/2 ಕ್ಷೇತ್ರ 1 ಎಕರೆ 11 ಗುಂಟೆ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಪ್ಪ ನನ್ನ ಅಣ್ಣ. ದಿ 5.10.1999 ರಂದು ನನ್ನ ತಂದೆಯು ನನ್ನ ಅಣ್ಣನಾದ ಲಕ್ಷ್ಮಪ್ಪನ ಪರವಾಗಿ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು ನನ್ನ ಅಣ್ಣನ ಪರವಾಗಿ ದಾನಪತ್ರ ಮಾಡಿಕೊಟ್ಟ ನಂತರ ದಿ 20.5.2002 ರಲ್ಲಿ ನನ್ನ ಅಣ್ಣನಾದ ಲಕ್ಷ್ಮಪ್ಪನು ಪ್ರತಿವಾದಿ ನಂಃ4 ರಿಂದ 8 ರವರ ತಂದೆಯಾದ ಮುನಿವೆಂಕಟಪ್ಪ ಇವರಿಗೆ 20 ಗುಂಟೆಗೆ ಸಂಬಂಧಿಸಿದಂತೆ ಖರೀದಿ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ಸಂಗತಿ ನನಗೆ ತಿಳಿದು ಬಂದ ನಂತರ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಖರೀದಿ ಆದ ನಂತರ ಮುನಿವೆಂಕಟಪ್ಪ, ಅವರು ತೀರಿಕೊಂಡ ನಂತರ ಪ್ರತಿವಾದಿ ನಂಃ4 ರಿಂದ 8 ರವರು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಉಳಿಕೆ ಜಮೀನಾದ 31 ಗುಂಟೆ ಜಮೀನನ್ನು ಪ್ರತಿವಾದಿ ನಂಃ4 ರವರಿಗೆ ದಿ 26.12.2003 ರಂದು ನನ್ನ ಅಣ್ಣನಾದ ಲಕ್ಷ್ಮಪ್ಪ ರವರು ಕ್ರಯಪತ್ರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

(Note: Since the witness PW–1 was not conversant with kannada language. Sri. ACN advocate was appointed as translator to translate the deposition of PW–1 from Telugu language to Kannada language. The counsel for the plaintiff and defendant had no objection for appointment of Sri. ACN advocate as translator)

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ